Bruhat Bengaluru Mahanagara Palike

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,

12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86,

# ದಿನಾಂಕ:06-03-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯೆ :ಬಿ12(5)/ಪಿಆರ್/35/2020-21 ದಿನಾಂಕ:21:09:2020

(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./15/2020-21 ದಿನಾಂಕ: 04-03-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಘ.ತ್ಯಾ.ನಿ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ ಬಿ.ಸಿ ರವಿಕುಮಾರ್ | ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀ. ಎ.ಚ್ ರಂಗನಾಥ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ |
| 4. | ಶ್ರೀಮತಿ. ಗೀತಾ ಕಿನಾಲ್ | ವಾರ್ಡ್ ಸಮಿತಿ ಸದಸ್ಯರು |
| 5. | ಶ್ರೀಮತಿ. ಮಂಜುಳಾ | ವಾರ್ಡ್ ಸಮಿತಿ ಸದಸ್ಯರು |
| 6. | ಶ್ರೀ. ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ |
| 7. | ಶ್ರೀ. ಹೊನ್ನಪ್ಪ | ವಾರ್ಡ್ ಸಮಿತಿ ಸದಸ್ಯರು |
| 8. | ಶ್ರೀ ಎಚ್.ಎಂ ಗಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ:67 |
| 9. | ಶ್ರೀಮತಿ ಜಿ. ಶೃತಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್- 67 |
| 10. | ಶ್ರೀ. ನಾಗರಾಜು | ಸಹಾಯಕ ಅಭಿಯಂತರರು ಬೆಂ.ಜಲ ಮಂಡಲಿ |
| 11. | ಶ್ರೀ. ಕೆ.ವಿ ಲೋಕೇಶ್ | ಪಶುಸಂಗೋಪನೆ ವಿಭಾಗ,ನಿರೀಕ್ಷಕರು |
| 12. | ಶ್ರೀ. ಶ್ರೀನಿವಾಸ ಗೌಡ | ಗುತ್ತಿಗೆದಾರರು ಘನ ತ್ಯಾಜ್ಯ ನಿರ್ವಹಣೆ |
| 13. | ಶ್ರೀ. ಗಿರೀಶ್ | ಸಹಾಯಕ ಅಭಿಯಂತರರು, ಬೆಸ್ಕಂ ಮಹಾಲಕ್ಷ್ಮೀಲೇಔಟ್ |
| 14. | ಶ್ರೀ. ಮಂಜುನಾಥ್ | ತೋಟಗಾರಿಕೆ ಇಲಾಖೆ ,ಮಹಾಲಕ್ಷ್ಮೀಲೇಔಟ್ |
| 15. | ಶ್ರೀ. ಮಲ್ಲಯ್ಯ | ಅರಣ್ಯ ಇಲಾಕೆ ಗುತ್ತಿಗೆದಾರರ ಸಿಬ್ಬಂದಿ |

ಪು.ತಿ.ನೋ



ವಿಶ್ವನಾಥ್.ಎ

Scanned by CamScanner

| | | |
|---|---|---|
| 16. | ಶ್ರೀ. ರಮೇಶ್ | ಪೊಲೀಸ್ ಕಾನ್ಸಟೆಬಲ್, ಮಹಾಲಕ್ಷ್ಮೀಲೇಔಟ್ ಪೊಲೀಸ್ ಠಾಣೆ |
| 17. | ಶ್ರೀ. ರಾಜು | ಪೊಲೀಸ್ ಕಾನ್ಸಟೆಬಲ್, ಮಹಾಲಕ್ಷ್ಮೀಲೇಔಟ್ ಪೊಲೀಸ್ ಠಾಣೆ |
| 18. | ಶ್ರೀ.ಎಂ ನಂಜಯ್ಯ | ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್,ಮಲ್ಲೇಶ್ವರಂ ಸಂಚಾರಿ ಠಾಣೆ |
| 19. | ಶ್ರೀ. ಮಂಜುನಾಥ್ | ಪೊಲೀಸ್ ಕಾನ್ಸಟೆಬಲ್ ಮಲ್ಲೇಶ್ವರಂ ಸಂಚಾರಿ ಠಾಣೆ |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಮಾರ್ಚ ಮಾಹೆಯ ಮೊದಲನೆ ಶನಿವಾರ ದಿ:06/03/2021ರಂದು ಬೆಳಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಸಭೆಗೆ ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀಮತಿ ಜಿ. ಶೃತಿ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್– 67 | ಡಾ।। ರಾಜಕುಮಾರ್ ರಸ್ತೆಯಲ್ಲಿ ರಸ್ತೆ ಕಾಮಗಾರಿಯು ಮುಗಿದಿದ್ದು ರಸ್ತೆಯ ಪಾದಚಾರಿಯ ಮಾರ್ಗದಲ್ಲಿ ಮತ್ತು ರಸ್ತೆಯ ಮೇಲೆ ಹೂಳು ಮತ್ತು ಪೇವರ್ಸ್‌ಗಳನ್ನು ಬಿಟ್ಟಿರುವುದರಿಂದ ದಿನನಿತ್ಯ ರಸ್ತೆ ಗುಡಿಸುವ ಕಾರ್ಮಿಕರಿಗೆ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕರ ದೂರಿನ ಸಂಬಂಧಿಸಿದಂತೆ ಡಾ।। ರಾಜಕುಮಾರ್ ರಸ್ತೆಯಲ್ಲಿ ರಸ್ತೆ ಕಾಮಗಾರಿಯು ಮುಗಿದಿದ್ದು ರಸ್ತೆಯ ಮೇಲಿನ ಹೂಳು ಮತ್ತು ಪೇವರ್ಸ್‌ಗಳನ್ನು ತೆರವುಗೊಳಿಸಲು ಟ್ರಾಫಿಕ್ ಇಂಜಿನಿಯರ್ ಸೆಲ್ ಅಭಿಯಂತರರಿಗೆ ದೂರವಾಣಿ ಮುಖೇನ ತಿಳಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಹಲವು ಕಡೆ ಒಳ ಚರಂಡಿಗಳಿಂದ ಹೂಳನ್ನು ತೆಗೆದು ರಸ್ತೆ ಮೇಲೆ ಬಿಟ್ಟಿರುವುದು ಕಂಡುಬಂದಿರುತ್ತದೆ ಇದರಿಂದ ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿರುತ್ತದೆ ಇದನ್ನು ಬೆಂ. ಒಳ ಚರಂಡಿ ಮಂಡಳಿಯವರು ತೆರವುಗೊಳಿಸ ಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು |
| ಉದಯಶಂಕರ್ **ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ ಮಹಾಲಕ್ಷ್ಮೀಲೇಔಟ್ ಸಿಗ್ನಲ್‌ನಿಂದ ಪಂಚಮುಖಿ ದೇವಸ್ಥಾನದ ಕಡೆಗೆ (ಬಲಕ್ಕೆ) ತಿರುಗುವ ರಸ್ತೆ ಮಾರ್ಗವನ್ನು ಡಿವೈಡರ್‌ನಿಂದ ಮುಚಿದ್ದು ಅದನ್ನು ಎಂದಿನಂತೆ ಮಾರ್ಗವನ್ನು ತೆರೆಯುವುದರಿಂದ ಸಾರ್ವಜನಿಕರಿಗೆ ಅನುಕುಲವಾಗುವುದು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಮಹಾಲಕ್ಷ್ಮೀಲೇಔಟ್ ಸಿಗ್ನಲ್ ಹತ್ತಿರ ವೈಟ್ ಟಾಪಿಂಗ್ ಕಾಮಗಾರಿಯು ಪ್ರಗತಿಯಲ್ಲಿದ್ದು ಮಾರ್ಗವನ್ನು ಡಿವೈಡರ್‌ನಿಂದ ಮುಚಿದ್ದು ಕಂಡುಬಂದಿರುತ್ತದೆ . ಇದರ ಬಗ್ಗೆ ಕಾರ್ಯಪಾಲಕ ಅಭಿಯಂತರರು ವೈಟ್ ಟಾಪಿಂಗ್ ರವರ ಹತ್ತಿರ ಚರ್ಚಿಸಿದ್ದು ಮತ್ತು ಇನ್ಸ್‌ಪೆಕ್ಟರ್ ಗಿರೀಶ್ ರವರ ಜೊತೆ ದೂರವಾಣಿ ಮುಖೇನ ಚರ್ಚಿಸಿದ್ದು ಕಾಮಗಾರಿ ಪೂರ್ಣಗೊಂಡ ಬಳಿಕ ಮಾರ್ಗವನ್ನು ಎಂದಿನಂತೆ ಸಾರ್ವಜನಿಕರ ವಾಹನ ಸಂಚಾರಕ್ಕೆ ಕಲ್ಪಿಸಬಹುದು ಎಂದು ತಿಳಿಸಿದರು |

ಪು.ತಿ.ನೊ



Scanned by CamScanner

| | |
|---|---|
| ಶ್ರೀಮತಿ. ಗೀತಾ ಕೇನಾಲ್ **ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ #5ಬಿ 19ನೇ "ಡಿ"ಮೈನ್‌ನಲ್ಲಿ ಮರಗಳ ಟ್ರಿಮ್ಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು |
| ಶ್ರೀ.ಮಲಯ್ಯ ಅರಣ್ಯ ಇಲಾಖೆ ಗುತ್ತಿಗೆದಾರರ ಸಿಬಂಧಿ | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಸಂಭಂದಿಸಿದ ಗುತ್ತಿಗೆದಾರರ ಸಿಬಂಧಿ ಶ್ರೀ.ಮಲಯ್ಯ ರವರು ಸಭೆಗೆ ಹಾಜರಿದ್ದು ಮರಗಳ ಕೊಂಬೆಗಳನ್ನು ಟ್ರಿಮಿಂಗ್ ಮಾಡಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ರಾಜಾಜಿನಗರ (1ನೇ ಬ್ಲಾಕ್ ಸುತ್ತಮುತ್ತಲು) ನಾಯಿಗಳ ಕಾಟ ಹೆಚ್ಚಾಗಿದ್ದು ರಸ್ತೆಗಳಲ್ಲಿ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಲೋಕೇಶ್ ಪಶುಸಂಗೋಪನೆ ಇಲಾಖೆ | ವಾರ್ಡ್ ಸಮಿತಿ ಅಧ್ಯಕ್ಷರವರ ದೂರಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶದನ್ವಯ ನಾಯಿಗಳನ್ನು ಒಂದೆಡೆಯಿಂದ ಬೇರೆಡೆಗೆ ಬಿಡಲು ಅವಕಾಶವಿರುವುದಿಲ್ಲ. ಆದ್ದರಿಂದ ನಾಯಿಗಳಿಗೆ ಶಸ್ತ್ರ ಚಿಕಿತ್ಸೆಯನ್ನು ನಡೆಸಿ ,ವಾಕ್ಸಿನ್ ನೀಡಿ ನಾಲ್ಕು ದಿನಗಳ ಶುಶ್ರೂಷೆಯನ್ನು ಮಾಡಿ ಮತ್ತೆ ಅದೇ ಸ್ಥಳದಲ್ಲಿ ಬಿಡಲಾಗುವುದು ಎಂದು ಮಾಹಿತಿ ಒದಗಿಸಿದರು. ಮತ್ತು ನಾಯಿಗಳನ್ನು ಹಿಡಿಯುವ ಕಾರ್ಯಾಚರಣೆ ಮಾಡಲಾಗುವುದಾಗಿ ತಿಳಿಸಿದರು |
| ಶ್ರೀ. ಎ.ಚ್ ರಂಗನಾಥ್ ಸಹಾಯಕ ಕಾರ್ಯಪಾಲಕ ಅಭಿಯಂತರು | ವಾರ್ಡ್‌ನ ಪೈಪ್‌ಲೈನ್ ರಸ್ತೆಯಲ್ಲಿ ಬೆಂ.ಜ.ಮಂ ಯವರು ನೀರಿನ ವ್ಯವಸ್ತೆಗೆ ರಸ್ತೆಯನ್ನು ಅಗೆಯುವ ವೇಳೆಯಲ್ಲಿ ಪಾದಚಾರಿ ಮಾರ್ಗದ ಚಪ್ಪಡಿ ಕಲ್ಲುಗಳನ್ನು ಮುರಿದು ಹಾಕಿದ್ದಾರೆ ಹಾಗು 15ನೇ ಅಡ್ಡ ರಸ್ತೆಯಲ್ಲಿ ಬೆಸ್ಕಂರವರು ದುರಸ್ತಿ ಕಾಮಗಾರಿ ಮಾಡಿ ಹೂಳನ್ನು ತೆರವುಗೊಳಿಸಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರು | ಸಹಾಯಕ ಕಾರ್ಯಪಾಲಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ ವಾರ್ಡ್‌ನ ಬೆಂ.ಜ.ಮಂ ಗುತ್ತಿಗೆದಾರರಿಗೆ ಚಪ್ಪಡಿ ಕಲ್ಲುಗಳನ್ನು ಹೊಸದಾಗಿ ಹಾಕಲು ಈಗಾಗಲೇ ತಿಳಿಸಿರುವುದು ಎಂದು ಸಭೆಯಲ್ಲಿ ತಿಳಿಸಿದರು |
| ಶ್ರೀ. ಗಿರೀಶ್ ಸಹಾಯಕ ಅಭಿಯಂತರರು ಬೆಸ್ಕಂ | ಸಹಾಯಕ ಕಾರ್ಯಪಾಲಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ ಬೆಸ್ಕಂ ಸಹಾಯಕ ಅಭಿಯಂತರರು ಸಭೆಗೆ ಆಜರಿದ್ದು ಹೂಳನ್ನು ತೆರವುಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿದರು |
| ಶ್ರೀಮತಿ. ಮಂಜುಳ **ವಾರ್ಡ್ ಸಮಿತಿ ಸದಸ್ಯರು** | ವಾರ್ಡನ ಕೇತಮಾರನಹಳ್ಳಿ ಮಾರಮ್ಮನ ದೇವಾಲಯ ಹತ್ತಿರ ಕಸ ಸರಿಯಾಗಿ ಗುಡಿಸುತ್ತಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಬಂಧಿಸಿದಂತೆ ಸಮಸ್ಯಯನ್ನು ಬಗೆಹರಿಸುವ ಬಗ್ಗೆ ಸುಕ್ತ ಕ್ರಮ ವಹಿಸುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರು | ವಾರ್ಡ್‌ನ 12ನೇ ಮೈನ್ ಬಿ.ಬಿ.ಎಂ.ಪಿ ಕಛೇರಿ ಎದುರು ಒಣಗಿರುವ ಮರ ತೆರವುಗೊಳಿಸಬೇಕು ಮತ್ತು ಮುಖ್ಯ ರಸ್ತೆಗಳಲ್ಲಿ ಮರಗಳ ಟ್ರಿಮ್ಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |

ಮು.ತಿ.ನೋ



ವಿಶ್ವನಾಥ.ಪ

Scanned by CamScanner

| | |
|---|---|
| ಶ್ರೀ.ಮಲಯ್ಯ<br>ಅರಣ್ಯ ಇಲಾಖೆ<br>ಗುತ್ತಿಗೆದಾರರ ಸಿಬಂಧಿ | ವಾರ್ಡ್ ಸಹಾಯಕ ಅಭಿಯಂತರರ ದೂರಿಗೆ ಸಂಬಂಧಿಸಿದಂತೆ ಮರವನ್ನು ತೆರವುಗೊಳಿಸುವುದಾಗಿ ತಿಳಿಸಿದರು |
| ಶ್ರೀ. ಶ್ರೀನಿವಾಸ ಗೌಡ<br>ಗುತ್ತಗೆದಾರರು | ವಾರ್ಡನ ಕಸದ ಗುತ್ತಿಗೆದಾರರಿಗೆ ಇಲಾಖೆ ವತಿಯಿಂದ ಕಸದ ಬಿಲ್ ಪಾವತಿಮಾಡಿರುವುದಿಲ್ಲ ಹಾಗು ಕೋವಿಡ್–19 ಬಿಲ್ ಪಾವತಿಮಾಡಿರುವುದಿಲ್ಲ ಇದನ್ನು ಕುರಿತು ಪತ್ರವನ್ನು ಸಹ ಹಿರಿಯ ಅಧಿಕಾರಿಗಳಿಗೆ ನೀಡಿರುತ್ತೇನೆ. ಇದರಿಂದ ಕಸದ ಗುತ್ತಿಗೆದಾರರಿಗೆ ಬಹಳ ಸಮಸ್ಯೆ ಉಂಟಾಗುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು |
| ಶ್ರೀಮತಿ.<br>ಗೀತಾ ಕೇನಾಲ್<br>**ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ 19ನೇ ಎಚ್ ಮೈನ್ ಗಣಪತಿ ದೇವಾಲಯದ ಹತ್ತಿರ ರಸ್ತೆಯಲ್ಲಿ ಆಂಬ್ಯೂಲೆನ್ಸ ನಿಲುಗಡೆ ಮಾಡುತ್ತಿರುತ್ತಾರೆ ಇದರಿಂದ ನಿವಾಸಿಗಳಿಗೆ ಹಾಗು ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿರುತ್ತದೆ |
| ಶ್ರೀ.ಎಂ ನಂಜಯ್ಯ<br>ಸಹಾಯಕ ಪೊಲೀಸ್<br>ಇನ್ಸ್‌ಪೆಕ್ಟರ್ | ವಾರ್ಡ್ ಸಮಿತಿ ಸದಸ್ಯರವರ ದೂರಿಗೆ ಸಂಬಂಧಿಸಿದಂತೆ ಸಮಸ್ಯೆಯನ್ನು ಸರಿಪಡಿಸಲಾಗುವುದು ಎಂದು ಸಭೆಗೆ ಭರವಸೆ ನೀಡಿದರು |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ 19ನೇ ಮೈನ್ ಟ್ರಾನ್ಸ್‌ಫಾರ್ಮರ್ ಹತ್ತಿರ ಡೇಬ್ರಿಸ್ ತೆರವುಗೊಳಿಸಲು ತಿಳಿಸಿದರು |
| ಶ್ರೀ ಬಿ.ಸಿ ರವಿಕುಮಾರ್<br>ಸಹಾಯಕ ಅಭಿಯಂತರು | ವಾರ್ಡ್ ಸಮಿತಿ ಅಧ್ಯಕ್ಷರ ದೂರಿಗೆ ಸಂಬಂಧಿಸಿದಂತೆ ವಾರ್ಡನ ಸಹಾಯಕ ಅಭಿಯಂತರು ಶ್ರೀ ಬಿ.ಸಿ ರವಿಕುಮಾರ್ ರವರು ಸಮಸ್ಯೆಯನ್ನು ಸರಿಪಡಿಸಲಾಗುವುದು ಎಂದು ಸಭೆಗೆ ಭರವಸೆ ನೀಡಿದರು |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಮೋದಿ ರಸ್ತೆ ಶಾಂತಿ ಸಾಗರ್ ಹೋಟಲ್ ಹತ್ತಿರ ಮತ್ತು ಬಿ.ಜಿ.ಎಸ್ ಶಾಲೆ ಹತ್ತಿರ ಒಣಗಿರುವ ಎಲೆಗಳ ರಾಶಿಗಳನ್ನು ತೆರವುಗೊಳಿಸಲು ತಿಳಿಸಿದರು |
| ಶ್ರೀಮತಿ ಜಿ. ಶೃತಿ<br>ಕಿರಿಯ ಆರೋಗ್ಯ<br>ಪರಿವೀಕ್ಷಕರು, ವಾರ್ಡ್– 67 | ವಾರ್ಡ್ ಸಮಿತಿ ಅಧ್ಯಕ್ಷರ ದೂರಿಗೆ ಸಂಬಂಧಿಸಿದಂತೆ ವಾರ್ಡನ ಕಿರಿಯ ಆರೋಗ್ಯ ಪರಿವೀಕ್ಷಕರು ಸಮಸ್ಯೆಯನ್ನು ಸರಿಪಡಿಸಲಾಗುವುದು ಎಂದು ಸಭೆಗೆ ಭರವಸೆ ನೀಡಿದರು |
| ಶ್ರೀ. ಹೊನ್ನಪ್ಪ<br>**ವಾರ್ಡ್ ಸಮಿತಿ ಸದಸ್ಯರು** | ವಾರ್ಡನ ಫ.ತ್ಯಾ.ನಿ ಮೇಸ್ತ್ರಿ (ನೇರ ವೇತನ) ಯೋಗೇಶ್‌ರವರನ್ನು ವಾರ್ಡ ನಂ–75 ಕ್ಕೆ ನಿಯೋಜಿಸಿರುತ್ತಾರೆ, ಅವರನ್ನು ಮತ್ತೆ ವಾರ್ಡ–67ಕ್ಕೆ ನಿಯೋಜಿಸಲು ವಾರ್ಡ ಸಮಿತಿ ಸದಸ್ಯರು ಸಭೆಯಲ್ಲಿ ಮನವಿಮಾಡಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಹಿರಿಯ ಆರೋಗ್ಯ ಪರೀವಿಕ್ಷಕರನ್ನು ಉದೇಶಿಸಿ ಕೋವಿಡ್ ಪ್ರಕರಣಗಳನ್ನು ನಿಗ ವಹಿಸಿ ತುರ್ತು ಕ್ರಮ ಕೈಗೊಳಲು ಮತ್ತು ಸುಕ್ತ ಚಿಕಿತ್ಸೆ ಕೊಡಿಸಲು ಕ್ರಮ ಕೈಗೊಳಲು ತಿಳಿಸಿದರು |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ನಿಷೇದಿತ ಪ್ಲಾಸ್ಟಿಕ್ ಬಳಸುತ್ತಿರುವ ಬಳಕೆದಾರರ ಮೇಲೆ ನಿಯಮಾನುಸಾರ ದಂಡ ಹಾಕುವುದಾಗಿ ತಿಳಿಸಿದರು |

**ಪ್ರತಿಯನ್ನು** ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.

ಮು.ತಿ.ನೋ



ವಿಶ್ವನಾಥ.ಎ

Scanned by CamScanner

2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ವೈದ್ಯಕೀಯ ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

Ravi
ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner